# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 42/2023 ಪಿ.ಡಬ್ಲ್ಯೂಃ 2

ಸಿಡಬ್ಲೂಃ 3

| | | |
|---|---|---|
| ಸಾಕ್ಷಿದಾರರ ಹೆಸರು | : | ಕೃಷ್ಣಕಾಂತ ದಿಗಂಬರ ನಾಯ್ಕ |
| ತಂದೆಯ ಹೆಸರು | : | ದಿಗಂಬರ ನಾಯ್ಕ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ್ತವ್ಯ | : | ಸದಾಶಿವಗಡ , ಕಾರವಾರ . |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 21-11-2025

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲಾ. ಆರೋಪಿತನ ಪರಿಚಯ ಇರುವುದಿಲ್ಲಾ. ಆತನನ್ನು ಇಂದೇ ಮೊದಲ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಸಾಕ್ಷಿಗೆ ನಿಪಿ.1 ನೋಟೀಸನ್ನು ತೋರಿಸಲಾಗಿ ಸಾಕ್ಷಿಯ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಿಪಿ.1 ಕ್ಕೆ ನಾನು ಪೋಲೀಸರ ಕೋರಿಕೆಯ ಮೇರೆಗೆ ಪೋಲೀಸ ಠಾಣೆಯಲ್ಲಿ ಸಹಿ ಮಾಡಿದ್ದು, ಯಾವ ಉದ್ದೇಶಕ್ಕಾಗಿ ಮಾಡಿರುತ್ತೇನೆಂದು ನನಗೆ ಗೊತ್ತಿಲ್ಲಾ. ಸಾಕ್ಷಿಗೆ ನಿಪಿ.3 ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ನಿಪಿ.3 ಕ್ಕೆ ನಾನು ಪೋಲೀಸರ ಕೋರಿಕೆಯ ಮೇರೆಗೆ ಪೋಲೀಸ ಠಾಣೆಯಲ್ಲಿ ಸಹಿ ಮಾಡಿದ್ದು , ಅದರಲ್ಲಿ ಏನು ಬರೆದಿರುತ್ತದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲಾ. ಪೋಲೀಸರ ಕೋರಿಕೆಯ ಮೇರೆಗೆ ಚಿತ್ತಾಕುಲಾ ಪೋಲೀಸ ಠಾಣೆಯಲ್ಲಿ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ನಿಪಿ.4 ಭಾವಚಿತ್ರದಲ್ಲಿ ತನ್ನ ಇರುವಿಕೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ.4 ಯಾವ ಉದ್ದೇಶಕ್ಕಾಗಿ ತೆಗೆಯಲಾಗಿದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲಾ. ನನ್ನ ಸಮಕ್ಷಮ ಪೋಲೀಸರು ಯಾವುದೇ ಅಬಕಾರಿಸ್ವತ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲಾ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು , ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕಃ 23.07.2022 ರಂದು ನಾನು ಮತ್ತು ಚಾಸಾ.3 ರವರು ಪಿಂಪಲಕಟ್ಟಾ ಹತ್ತಿರ ನಿಂತುಕೊಂಡಿದ್ದಾಗ ಪೋಲೀಸರು ಅಲ್ಲಿಗೆ ಬಂದಿದ್ದು , ಈ ಪ್ರಕರಣದಲ್ಲಿ ಪಂಚರಾಗುವಂತೆ ನಮ್ಮನ್ನು ಕೋರಿಕೊಂಡಿದ್ದು , ನಾವು ಅದಕ್ಕೆ ಒಪ್ಪಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ.1 ನೋಟೀಸನ್ನು ನೀಡಿದ್ದು , ನಾನು ಅದಕ್ಕೆ ಸಹಿಮಾಡಿರುತ್ತೇವೆಂದರೆ ಸರಿಯಲ್ಲ. ನಂತರ ಪೋಲೀಸರು ಸದಾಶಿವಗಡ ಗಣಪತಿ ದೇವಸ್ಥಾನದ ಆರ್ಕನ ಎದುರುಗಡೆ ರಸ್ತೆಯನ್ನು ದಾಟಿ ಸುಮಾರು 50 ಮೀಟರ ದೂರದಲ್ಲಿ ಪಶ್ಚಿಮಕ್ಕೆ ಖಾಲಿ ಇರುವ ಮನೆಯ ಪಕ್ಕದಲ್ಲಿನ ಗಿಡಗಂಟಿಗಳಲ್ಲಿ ಹಾಗೂ ಮನೆಯ ಹೊರಗಡೆ ಶೆಡ್ ನಲ್ಲಿ ಅಕ್ರಮವಾಗಿ ಆರೋಪಿತನು ಗೋವಾ ರಾಜ್ಯದ ಮದ್ಯ ತುಂಬಿದ ಸರಾಯಿ ಬಾಟಲುಗಳನ್ನು ಸಂಗ್ರಹಿಸಿ ಇಟ್ಟಿದ್ದು , ಈ ಬಗ್ಗೆ ಪೋಲೀಸರು ದಾಳಿಯನ್ನು ನಡೆಸಿ ನಮ್ಮ ಸಮಕ್ಷಮ ಆರೋಪಿತನನ್ನು ದಸ್ತಗಿರಿ ಮಾಡಿರುತ್ತಾರೆ ಅಲ್ಲದೇ ಆರೋಪಿತನ ತಾಬಾದಿಂದ ಅಬಕಾರಿ ಸ್ವತ್ತುಗಳನ್ನು ಜಪ್ತುಪಡಿಸಿದ್ದು , ಆ ಸಮಯದಲ್ಲಿ ನಿಪಿ.3 ರಂತೆ ವಿವರವಾದ ಪಂಚನಾಮೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ.3 ನ್ನು ಸಂಪೂರ್ಣವಾಗಿ ಓದಿ ಹೇಳಲಾಗಿ ಸಾಕ್ಷಿ ಅದನ್ನು ನಿರಾಕರಿಸಿರುತ್ತಾರೆ. ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು – ಇಲ್ಲಾ ಎಂದು ನುಡಿದಿರುತ್ತಾರೆ. –**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).**

**ಓ. ಹೇ.ಕೇ. ಸರಿ ಇದೆ.**

**ಪ್ರ.ದ.ನ್ಯಾದಂ. ಕಾರವಾರ**